ಉಳ್ಳವರಾಗಿರಬಲ್ಲರು.

ಪ್ರೀತಿಯಾದ ನಂತರವೂ ಈ ಮೂರು ಕೋನಗಳಲ್ಲಿ ಯಾವ ಕೋನ ಮುರಿದರೂ ಅಲ್ಲಿ ಪ್ರೀತಿಯ ಸ್ವರೂಪ ಪೂರ್ಣವಾಗಲಾರದು. ರಮ್ಯಪ್ರೀತಿ ಬೆಳೆದು ಪ್ರಬುದ್ಧತೆಯ ಕೊನೆಯ ಘಟ್ಟವಾದ ದೀರ್ಘಕಾಲೀನ ಬದ್ಧತೆಯ ಹಂತವನ್ನು ಯಶಸ್ವಿಯಾಗಿ ತಲುಪಲಾರದು.

## ರಮ್ಯ ಪ್ರೀತಿಯ ಭಿನ್ನ ರೂಪಗಳು

ಪ್ರೀತಿ ಮಾಡುವ ಸ್ವರೂಪ ಸ್ಥಿತಿಸ್ಥಾಪಕತ್ವ ಗುಣ ಹೊಂದಿರುವಂತಹದ್ದು. ಅದು ಕಾಲದ ಹರಿವಿನಲ್ಲಿ ಹೊಸ ಹೊಸ ರೂಪಧಾರಣೆ ಮಾಡುತ್ತದೆ. ಅಂತೆಯೇ ಜನರು ಬದುಕುವ ಸಮಾಜ ಮತ್ತು ಸಾಂಸ್ಕೃತಿಕ ಪ್ರಪಂಚಗಳು ಜಗತ್ತಿನ ಎಲ್ಲೆಡೆ ಭಿನ್ನಮಾದರಿಯದ್ದಾಗಿವೆ. ಎಲ್ಲೆಡೆ ಪರಿಸರ ಮತ್ತು ಕಾಲಕ್ಕೆ ತಕ್ಕಂತೆ ಪ್ರೀತಿಸುವ ವಿಧಗಳು ಕೂಡ ಬದಲಾಗುತ್ತ ಸಾಗಿವೆ. ಈ ವಿಚಾರದಲ್ಲಿ ಮಡಿವಂತಿಕೆ ನಿಧಾನಕ್ಕೆ ಹಿಂದೆ ಸರಿದಿದೆ.

ಶಾರೀರಿಕ ಸಂಬಂಧಗಳು ಕೆಲವೆಡೆ (ಮಧ್ಯ ಪ್ರಾಚ್ಯ ದೇಶಗಳು) ಎಷ್ಟು ದೊಡ್ಡದಾಗುತ್ತಿವೆಯೋ ಇತರೆಡೆ ಅಷ್ಟೇ ಗೌಣವಾಗುತ್ತಿವೆ. ಆದರೆ ಒಂದಂತೂ ಎಲ್ಲೆಡೆ ನಿಜ. ಯುವಜನತೆ ತಮ್ಮ ಸ್ವಾತಂತ್ರ್ಯ ಮತ್ತು ಸ್ವೇಚ್ಛೆಯನ್ನು ಇನ್ನಷ್ಟು ಮುತುವರ್ಜಿಯಿಂದ ಕಾಯ್ದುಕೊಳ್ಳುತ್ತಿದ್ದಾರೆ. ಜಗತ್ತಿನಲ್ಲೆಲ್ಲ ಒಂದೇ ಬಗೆಯ ರೂಢಿಗಳಿರಲಿ ಎಂಬ ತುಡಿತವನ್ನು ಹೊಂದಿದ್ದಾರೆ.

ಗ್ರೀಕರು ಈ ಹಿಂದೆ ಅತ್ಯಂತ ಶುದ್ಧವಾದ ಪ್ರೀತಿಯೊಂದನ್ನು ಉಲ್ಲೇಖಿಸುತ್ತಿದ್ದ ಕಾಲವೊಂದಿತ್ತು. ಅದು ದೈಹಿಕ ಆಕರ್ಷಣೆಯನ್ನು ಮೀರಿದ ಪ್ರೀತಿ. ಇದನ್ನು ಅಗೆಪೆ (Agepe) ಮತ್ತು ಲೈಂಗಿಕ ಆಕರ್ಷಣೆ ಇರುವ ಪ್ರೀತಿಯನ್ನು (Eros) ಎಂದು ಗುರುತಿಸಿದ್ದಾರೆ. ಆದರೆ ಈ ಆಧುನಿಕ ಕಾಲದಲ್ಲಿ ಅಗೆಪೆ ಎನ್ನುವ ಪದವೇ ಎರಡಕ್ಕೂ ಬಳಕೆಯಾಗುತ್ತಿದೆ. ಅಂದರೆ ಇಲ್ಲಿ ಒಂದಿಲ್ಲದೆ ಇನ್ನೊಂದಿಲ್ಲದ ಅರ್ಥದಲ್ಲಿ ಸಮಾಜದ ಅರ್ಥೈಸುವಿಕೆ ಮಟ್ಟಸವಾಗಿದೆ.

ಲ್ಯಾಟಿನ್‌ನ 'ಅಮೆರೆ' (to love) ಎನ್ನುವ ಪದವನ್ನು ಬಳಸುತ್ತಿದ್ದರು. ಇಟಾಲಿಯನ್ನರು ಈ ಪದವನ್ನಿನ್ನೂ ಬಳಕೆಯಲ್ಲಿಟ್ಟಿದ್ದಾರೆ. ಇಂಗ್ಲಿಷಿನ 'ಲವ್' ಎನ್ನುವ ಪದ ಲ್ಯಾಟಿನ್ನಿನ 'ಅಮೊ' (amo) ಪದದ ಮತ್ತೊಂದು ಹ್ರಸ್ವ ರೂಪ. 'ರೋಮ' ಎನ್ನುವ ಲ್ಯಾಟಿನ್ ಪದ ಕೂಡ ರೊಮ್ಯಾಂಟಿಕ್ ಸಂಬಂಧಗಳ ಅರ್ಥವನ್ನು ನೀಡುತ್ತಿತ್ತು. ಆದರೆ ಈಗ ಅದರ ಅರ್ಥ ಬದಲಾಗಿದೆ.

ಚೀನೀಯರು 'ಕನ್ಫ್ಯೂಸಿಯನಿಸಂ' (Confucianism) ಮತ್ತು 'ಮೊಹಿಸಂ' (Mohism) ಎನ್ನುವ ಎರಡು ಆಧ್ಯಾತ್ಮಿಕ ವಿಧದ ಪ್ರೀತಿಗಳನ್ನು ಗುರುತಿಸುತ್ತಾರೆ. ಮೊದಲನೆಯದು ಆದರ, ಕರ್ಮ ಮತ್ತು ಕರ್ತವ್ಯಗಳೇ ಪ್ರಧಾನವಾದ ಪ್ರೀತಿ. ಎರಡನೆಯದು, ಜಗತ್ತಿನ ಇತರೆ ಕಡೆಯಂತಹ ಮುಕ್ತ ಪ್ರೀತಿಯ ಅರ್ಥವನ್ನು ನೀಡುವಂತದ್ದು. ಇದು ರಮ್ಯ ಪ್ರೀತಿಯನ್ನೂ ಒಳಗೊಳ್ಳುತ್ತದೆ. ಆದರೆ 4 ಎ.ಡಿ. ಯಲ್ಲಿ ಚೈನೀಸ್ ದಾರ್ಶನಿಕ ಮೋಝಿ (Mozi) ಎನ್ನುವವನು ಮಂಡಾರಿನ್ (manadarin) ಸಿದ್ಧಾಂತಗಳನ್ನು ಸೃಷ್ಟಿಸಿದ. ಇದು ಶ್ರೇಣೀಕೃತ ಸಮಾಜ ಮತ್ತು ಪ್ರೀತಿಯ ವ್ಯವಹಾರಕ್ಕೆ ವಿರುದ್ಧವಾಗಿ ನಿಂತ ದೃಷ್ಟಿಕೋನವನ್ನು ಹೊಂದಿತ್ತು. ಅದಾದ ನಂತರದ ಚೈನೀಸ್ ಬುದ್ಧಿಸಂ 'ಆಯ್' (Ai) ಎನ್ನುವ ತತ್ವಗಳನ್ನು ಪರಿಚಯಿಸಿತು. ಸ್ವಾರ್ಥ ಅಥವಾ ನಿಸ್ವಾರ್ಥ ರೂಪದ ಪ್ರೀತಿಯ ಬಗ್ಗೆ ಇದು ಮಾತಾಡಿತು. ಜೀವನ ದರ್ಶನ ಎರಡರಿಂದಲೂ ಸಾಧ್ಯವೆಂದಿತು. ಇದನ್ನೇ ಇಂಗ್ಲಿಷ್‌ನ 'ಲವ್' ಎನ್ನುವ ಅರ್ಥದಲ್ಲಿ ಇಂದು ಬಳಸಲಾಗುತ್ತದೆ.

ಜಪಾನಿನಲ್ಲೂ 'ಆಯ್' (Ai) ಎನ್ನುವ ಪದದ ಬಳಕೆಯಿತ್ತು. ಆದರೆ ಅವರು ಅದನ್ನು ನಿಸ್ವಾರ್ಥ ಪ್ರೀತಿಯನ್ನು (ಉದಾಹರಣೆಗೆ, ತಾಯಿ ಮತ್ತು ಮಗುವಿನ ಪ್ರೀತಿಯನ್ನು) ವರ್ಣಿಸಲು ಬಳಸುತ್ತಿದ್ದರಂತೆ. 1868ರ ಕ್ರಾಂತಿಯ ನಂತರ 'ಕೋಯ್' (koi) ಎನ್ನುವ ಪದ ಸ್ವಾರ್ಥ ಪ್ರೇಮದ ಹಂಬಲವನ್ನು ಪ್ರತಿನಿಧಿಸಲು ಶುರುಮಾಡಿತು. ಆದರೆ ಇದೀಗ ಆ ಪದದ ಬಳಕೆ ವ್ಯಾಮೋಹದ ಪ್ರೀತಿಯನ್ನು ಬಳಸಲು ಉಪಯೋಗಿಸಲಾಗುತ್ತಿದೆ. ಮೂರನೆಯ ಪದ 'ರೆನೇ' (renai) ಇದೀಗ ರಮ್ಯ ಪ್ರೇಮವನ್ನು ಬಿಂಬಿಸಲು ವ್ಯಾಪಕವಾಗಿ ಬಳಕೆಯಾಗುತ್ತಿರುವ ಪದ.

ಪೌರ್ವಾತ್ಯ ದೇಶಗಳು ರಮ್ಯಪ್ರೇಮಕ್ಕಿಂತ ಹೆಚ್ಚಾಗಿ ಕರ್ತವ್ಯವನ್ನೇ ಪ್ರಧಾನ ಮಾಡಿಕೊಂಡ ಸಂಸ್ಕೃತಿಯನ್ನು ಬಹುಕಾಲ ಹೊಂದಿದ್ದವು. ಸಮಾಜದಲ್ಲಿ ಶ್ರೇಣೀಕೃತ ಪದ್ಧತಿಗಳೇ ಆಳುತ್ತಿದ್ದು ರಮ್ಯಪ್ರೇಮ ನಿಷಿದ್ಧವಾಗಿತ್ತು. ಆದರೆ ಆ ಕಾಲದಲ್ಲಿ ರಮ್ಯಪ್ರೇಮ ಇರಲಿಲ್ಲ ಎಂದಲ್ಲ. ಅದಕ್ಕೆ ಅಧಿಕೃತ ಸ್ಥಾನ ಇರಲಿಲ್ಲ ಎಂದರ್ಥ. ಗ್ರೀಕರು, ಭಾರತೀಯರು ಶೃಂಗಾರ ಪ್ರಧಾನ ಕಥೆ–ಪ್ರೀತಿಗಳನ್ನು ಸಹಸ್ರಾರು ವರ್ಷಗಳಿಂದ ಹೇಳುತ್ತಾ ಬಂದಿರುವುದನ್ನು ರಮ್ಯ ಪ್ರೇಮದ ವ್ಯಾಪಕತೆಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಗಮನಿಸಬಹುದು.

ಪರ್ಷಿಯನ್ನರ 'ಇಷ್ಕ್' (Ishq) ಎನ್ನುವ ಶಬ್ದ ಅರೇಬಿಕ್ ಭಾಷೆಯಿಂದ ಬಂದದ್ದು. ಪರ್ಷಿಯನ್ನರ ಸಂಸ್ಕೃತಿಯಿಡೀ ಪ್ರೀತಿಯ ಪತ್ತಲಗಳಲ್ಲೇ ಅಲಂಕೃತಗೊಂಡಂತಹದ್ದು. 'ಎಲ್ಲವೂ ಪ್ರೀತಿ ಮತ್ತು ಪ್ರೀತಿಗಾಗಿ ಎಲ್ಲ' ಎಂಬ ತತ್ವವನ್ನು ಅವರು ಅಳವಡಿಸಿಕೊಂಡಿದ್ದರು. ಇವರು ಪ್ರೀತಿಯ ನಾಲ್ಕು ಘಟ್ಟಗಳನ್ನು ಗುರುತಿಸಿದ್ದರು. ಅದು ಇಂದಿನ ವೈಜ್ಞಾನಿಕ ವಿವರಣೆಯನ್ನು ಹೋಲುತ್ತದೆ.

## ಪ್ರೀತಿ ಸುತ್ತಣ ರಾಜಕೀಯ

ಪ್ರೀತಿ ಅದೆಷ್ಟೇ ರಮ್ಯವಾದರೂ ಶುದ್ಧ ಮತ್ತು ಪ್ರಬುದ್ಧವಾದರೂ ಅದು ಹಲವು ವಿಕೃತ ಮನಸ್ಸುಗಳ ಮತ್ತು ವ್ಯವಸ್ಥೆಗಳ ಕೆಂಡದಲ್ಲಿ ಹಾದುಬರಬೇಕಾದ ಪರಿಸ್ಥಿತಿಯನ್ನು ಪ್ರತಿಕಾಲದಲ್ಲೂ ಎದುರಿಸಿದೆ.

ಪ್ರೀತಿಸುವ ಮನಸ್ಸಿನ ಜನರನ್ನು ತಮ್ಮ ಗಾಳದಲ್ಲಿ ಸಿಲುಕಿಸಿ ವ್ಯವಸ್ಥಿತವಾಗಿ ಅದರ ಪ್ರಯೋಜನವನ್ನು ಪಡೆವ ಹಲವು ಘಟಕಗಳು, ಸಂಘ–ಸಂಸ್ಥೆಗಳು ಸಮಾಜದಲ್ಲಿವೆ. ಅದು ಮನೆಯ ಸಾಂಸಾರಿಕ ರಾಜಕೀಯವಿರಬಹುದು (ಉದಾ. ವ್ಯಕ್ತಿ ಮತ್ತು ಕುಟುಂಬ ಪ್ರತಿಷ್ಠೆ, ಆಸ್ತಿ ಪಾಲು, ಸಂಬಂಧಗಳ ಒತ್ತಡ, ಮರ್ಯಾದಾ ಹತ್ಯೆ). ಸಮಾಜದ ಅವಹೇಳನ, ಬಹಿಷ್ಕಾರ, ನಿಂದನೆ ಮತ್ತು ತಾರತಮ್ಯಗಳು (ಧರ್ಮ, ಜಾತಿ, ಕುಲ, ಗೋತ್ರ, ಆರ್ಥಿಕ ತಾರತಮ್ಯ,ಸಮುದಾಯ ಪ್ರತಿಷ್ಠೆ ಇತ್ಯಾದಿ) ಇರಬಹುದು, ದೇಶದ ರಾಜಕೀಯ (ಸಮಾಜವನ್ನು ಪ್ರಕ್ಷುಬ್ಧಗೊಳಿಸುವುದು, ಮತಗಳಿಸಲು ಸಮುದಾಯಗಳ ನಡುವೆ ದ್ವೇಷ ಬಿತ್ತುವುದು ಇತ್ಯಾದಿ) ಷಡ್ಯಂತ್ರಗಳು ಇರಬಹುದು.

ಕೆಲವರು ಪ್ರೀತಿಸುವ ಜೀವಗಳನ್ನು ತಮ್ಮ ಲಾಭಕ್ಕಾಗಿ ಒಂದು ವಸ್ತುವಿನಂತೆ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿರುತ್ತಾರೆ. ಇದೆಲ್ಲದರ ನಡುವೆ ಕೆಲವು ಅಂತರರಾಷ್ಟ್ರೀಯ ಭಯೋತ್ಪಾದಕ ಘಟಕಗಳು ಪ್ರೀತಿಯೊಂದನ್ನೇ ಅಲ್ಲದಿದ್ದರೂ ಅದನ್ನೂ ಒಂದು ಆಮಿಷವಾಗಿ ಬಳಸಿರುವ ಉದಾಹರಣೆಗಳೂ ಇವೆ. ಇದೆಲ್ಲದರ ಬಗ್ಗೆಯೂ ಪ್ರೀತಿಸುವವರ ಗಮನ ಇರಬೇಕು.

ಭಾರತದ ದೊಡ್ಡ ಪಟ್ಟಣಗಳಲ್ಲಿ ಜನರು ತಮ್ಮ ಸಂಗಾತಿಗಳನ್ನು ಆಯ್ದುಕೊಳ್ಳುವಲ್ಲಿ ಹೆಚ್ಚು ಹೆಚ್ಚು ನಿರ್ಭಿಡೆಯನ್ನು ಮೈಗೂಡಿಸಿಕೊಳ್ಳುತ್ತಿದ್ದಾರೆ. ಲಿವಿಂಗ್ ಟುಗೆದರ್ ಸಾಮಾನ್ಯ ಎನ್ನುವಂತಾಗಿದೆ. ಸಲಿಂಗ ಕಾಮಿಗಳೆಂದು ಹೇಳಿಕೊಳ್ಳಲು ಹಿಂಜರಿಯುತ್ತಿಲ್ಲ. ಜಾತಿ–ಧರ್ಮಗಳನ್ನು ಮೀರಿ ತಮ್ಮ ಸಂಗಾತಿಗಳನ್ನು ಆಯ್ದುಕೊಳ್ಳುತ್ತಿದ್ದಾರೆ.

ಪ್ರೀತಿಯನ್ನು ಭಾವಾನಾತ್ಮಕತೆಯೊಂದಿಗೆ ನೋಡಬಹುದು. ಯಾವುದು ಪ್ರೀತಿ, ಯಾವುದು ಆಕರ್ಷಣೆ ಅಥವಾ ಇಷ್ಟಪಡುವಿಕೆ ಎಂದೆಲ್ಲ ವಿಂಗಡಿಸಬಹುದು. ಎಚ್ಚರಿಕೆಯಿಂದ ಸಂಭಾಳಿಸಬಹುದು. ಆದರೆ ರಾಜಕೀಯ ದುರುದ್ದೇಶಗಳಲ್ಲಿ ಪ್ರೀತಿ ನಲುಗುವುದನ್ನು ತಡೆಯುವುದು ಕೂಡ ಅತ್ಯಂತ ಮುಖ್ಯ.